## ಸಂಪನ್ಮೂಲ ವಿಮರ್ಶೆ

Azim Premji University

# ಶಿಕ್ಷಕರ ಮಾರ್ಗದರ್ಶಿ: ಪ್ರಕೃತಿ ಆಧಾರಿತ ಹೊರಾಂಗಣ ಚಟುವಟಿಕೆಗಳು

ಶಿಕ್ಷಕರ ಮೂಲೆ

- ವಿದ್ಯಾರ್ಥಿಗಳು ತಮ್ಮ ಸುತ್ತಮುತ್ತಲ ಪರಿಸರದಲ್ಲಿ ಕಾಣುವ (ಮನುಷ್ಯರಲ್ಲದ) ವಿವಿಧ ಜೀವಿಗಳನ್ನು ಅನ್ವೇಷಿಸಲು ಪ್ರೇರೇಪಿಸುವ ಉದ್ದೇಶದಿಂದ ಈ ಮೂರು ಚಟುವಟಿಕೆಗಳನ್ನು ರೂಪಿಸಲಾಗಿದೆ. ತಮ್ಮ ಮನೆ, ಶಾಲೆ ಅಥವಾ ಹತ್ತಿರದ ಮಾರುಕಟ್ಟೆ, ಗದ್ದೆ ಮತ್ತು ರಸ್ತೆ ಬದಿಗಳಲ್ಲಿ ಸಾಮಾನ್ಯವಾಗಿ ಕಾಣುವ ಗಿಡ-ಮರ ಹಾಗೂ ಪ್ರಾಣಿ-ಪಕ್ಷಿಗಳನ್ನು ಮಕ್ಕಳು ಹೆಚ್ಚು ವಿವರವಾಗಿ ಗಮನಿಸಲು ಶಿಕ್ಷಕರು ಈ ಚಟುವಟಿಕೆಗಳನ್ನು ಬಳಸಬಹುದು.
- ನಾವು ಈ ಚಟುವಟಿಕೆಗಳ ವಿನ್ಯಾಸವನ್ನು ಉದ್ದೇಶಪೂರ್ವಕವಾಗಿ ಬಹಳ ಸರಳವಾಗಿ ಇರಿಸಿದ್ದೇವೆ. ವಿದ್ಯಾರ್ಥಿಗಳು ಸಾಮಾನ್ಯವಾಗಿ, ಪ್ರಕೃತಿಯ ಬಗ್ಗೆ ಹೆಚ್ಚಾಗಿ ಪಠ್ಯಪುಸ್ತಕಗಳಿಂದ ಅಥವಾ ತರಗತಿಯ ಚೌಕಟ್ಟಿನೊಳಗಿಂದ ಮಾತ್ರ ಕಲಿಯುತ್ತಾರೆ. ಮಕ್ಕಳು ಸಾವಧಾನವಾಗಿ ತಮ್ಮ ಸುತ್ತಮುತ್ತಲಿನ ಜೀವಸಂಕುಲದ ಸಮೃದ್ಧಿ ಮತ್ತು ವೈವಿಧ್ಯವನ್ನು ಗಮನಿಸಿ, ಪ್ರಕೃತಿಯು ನೀಡುವ ಅನ್ವೇಷಣೆಯ ಸಂತೋಷ ಹಾಗೂ ಅಚ್ಚರಿಯ ಭಾವನೆಯನ್ನು ಕಂಡುಕೊಳ್ಳಲು ಸಹಾಯ ಮಾಡುವುದು ನಮ್ಮ ಮುಖ್ಯ ಉದ್ದೇಶ.

### ಶಿಕ್ಷಕರಿಗೆ ಸಲಹೆಗಳು:

1. ಯಾವುದೇ ಚಟುವಟಿಕೆಯನ್ನು ಮಾಡುವ ಕೆಲವು ದಿನಗಳ ಮೊದಲು ಅದರ ವಿಷಯವನ್ನು ವಿದ್ಯಾರ್ಥಿಗಳಿಗೆ ತಿಳಿಸಿ. ಆ ವಿಷಯದ ಬಗ್ಗೆ ಅವರಿಗೆ ಬರುವ ಆಲೋಚನೆ ಮತ್ತು ಪ್ರಶ್ನೆಗಳನ್ನು ಬರೆದಿಡಲು ಪ್ರೋತ್ಸಾಹಿಸಿ. ಚಟುವಟಿಕೆ ಮಾಡುವ ಹಿಂದಿನ ದಿನ ಮಕ್ಕಳಿಗೆ ತಮ್ಮ ಪ್ರಶ್ನೆಗಳನ್ನು ಹಂಚಿಕೊಳ್ಳಲು ಅವಕಾಶ ನೀಡಿ. ಅವುಗಳನ್ನು ಬೋರ್ಡ್ ಮೇಲೆ ಬರೆದು ಅದರ ಬಗ್ಗೆ ಚರ್ಚೆ ನಡೆಸಿ.
2. ಚಟುವಟಿಕೆಯ ದಿನದಂದು ಮಕ್ಕಳಿಗೆ ಚಟುವಟಿಕೆ ಹಾಳೆಯನ್ನು ಕೊಡಿ. ಚಟುವಟಿಕೆಯಲ್ಲಿ ಅವರು ಏನು ಮಾಡಬೇಕು ಎಂಬುದನ್ನು ವಿವರಿಸಿ. ಮಕ್ಕಳಿಗೆ ಒಂದು ವಿಷಯವನ್ನು ಸ್ಪಷ್ಟವಾಗಿ ತಿಳಿಸಿ: ಪ್ರಕೃತಿಯನ್ನು ಗಮನಿಸುವುದು ಎಂದರೆ ಕಂಡ ಪ್ರತಿಯೊಂದು ಗಿಡ ಅಥವಾ ಪ್ರಾಣಿಯ ಹೆಸರನ್ನು ತಿಳಿದುಕೊಳ್ಳುವುದು ಎಂದಲ್ಲ. ಬದಲಾಗಿ, ತಾವು ಕಂಡದ್ದನ್ನು ಅವರು ತಮ್ಮದೇ ಶೈಲಿಯಲ್ಲಿ ಎಷ್ಟು ಚೆನ್ನಾಗಿ ವಿವರಿಸುತ್ತಾರೆ ಎಂಬುದು ಮುಖ್ಯ. ಅವರಿಗೆ ಆಸಕ್ತಿ ಮೂಡಿಸುವ ಯಾವುದೇ ಜೀವಿಯ ಬಗ್ಗೆ ಅವರು ಎಷ್ಟು ಸಾಧ್ಯವೋ ಅಷ್ಟು ವಿವರವಾಗಿ ಹೇಳಲು/ಬರೆಯಲು ಪ್ರೋತ್ಸಾಹಿಸಿ.
3. ಸಾಧ್ಯವಾದರೆ, ಎಲ್ಲರೂ ಒಟ್ಟಾಗಿ ಚಟುವಟಿಕೆಯನ್ನು ಪ್ರಾರಂಭಿಸಿ. ಉದಾಹರಣೆಗೆ, ಗೋಡೆಯ ಮೇಲೆ ಯಾವುದಾದರೂ ಒಂದು ಕೀಟ ಕಂಡರೆ ಇಂತಹ ಪ್ರಶ್ನೆಗಳನ್ನು ಕೇಳಿ: ಆ ಕೀಟ ಹೇಗೆ ಕಾಣುತ್ತಿದೆ? ಅದನ್ನು ನೋಡಿರದ ಒಬ್ಬ ವ್ಯಕ್ತಿಗೆ ನೀವು ಹೇಗೆ ವಿವರಿಸುತ್ತೀರಿ? ಅದು ಇರುವ ಗೋಡೆ ಅಥವಾ ಜಾಗ ಹೇಗೆ ಕಾಣುತ್ತಿದೆ? ಆ ಕೀಟ ಏನು ಮಾಡುತ್ತಿದೆ? ಇಂತಹ ಕೀಟವನ್ನು ನೀವು ಬೇರೆ ಎಲ್ಲಾದರೂ ನೋಡಿದ್ದೀರಾ? ಅದು ಬೇರೆ ಯಾವುದಾದರೂ ಜೀವಿಯೊಂದಿಗೆ ಬೆರೆಯುತ್ತಿದೆಯೇ? ಅದರಲ್ಲಿ ನಿಮಗೆ ವಿಶೇಷ ಅನಿಸಿದ್ದು ಏನು? ಯಾವುದಾದರೂ ಭಾಷೆಯಲ್ಲಿ ಅದರ ಹೆಸರು ನಿಮಗೆ ಗೊತ್ತಿದೆಯೇ?
4. ಪ್ರತಿ ವಿದ್ಯಾರ್ಥಿ ಅಥವಾ ತಂಡಕ್ಕೆ ತಮ್ಮ ವೀಕ್ಷಣೆಗಳನ್ನು ಯಾವ ರೂಪದಲ್ಲಿ ದಾಖಲಿಸಬೇಕೆಂದು ನಿರ್ಧರಿಸಲು ಸ್ವಾತಂತ್ರ್ಯ ನೀಡಿ. ಉದಾಹರಣೆಗೆ, ಅವರು ತಾವು ಕಂಡದ್ದನ್ನು ವಿವರಣೆಗಳು, ಕವನಗಳು, ರೇಖಾಚಿತ್ರಗಳು ಅಥವಾ ಒಣಗಿಸಿದ ಸಸ್ಯದ ಭಾಗಗಳಿಂದ ಮಾಡಿದ ಚಿತ್ರಜೋಡಣೆಗಳ (Collages) ಮೂಲಕವೂ ದಾಖಲಿಸಬಹುದು.
5. ಚಟುವಟಿಕೆಯ ಕೊನೆಯಲ್ಲಿ ವಿದ್ಯಾರ್ಥಿಗಳು ತಾವು ಗಮನಿಸಿದ ವಿಷಯಗಳನ್ನು ಪರಸ್ಪರ ಹಂಚಿಕೊಳ್ಳಲು ಮತ್ತು ಚರ್ಚಿಸಲು ಆಹ್ವಾನಿಸಿ. ತಮ್ಮ ವೀಕ್ಷಣೆಯ ಸಮಯದಲ್ಲಿ ಉದ್ಭವಿಸಿದ ಯಾವುದೇ ಪ್ರಶ್ನೆಗಳನ್ನು ದಾಖಲಿಸಲು ಮತ್ತು ಹಂಚಿಕೊಳ್ಳಲು ಅವರನ್ನು ಪ್ರೋತ್ಸಾಹಿಸಿ.
6. ಮಕ್ಕಳಿಗೆ ಈ ಚಟುವಟಿಕೆಗಳಲ್ಲಿ ಹೆಚ್ಚು ಆಸಕ್ತಿ ಇದ್ದರೆ, ಅವರು 'ಪ್ರಕೃತಿ ದಿನಚರಿ'ಯೊಂದನ್ನು (Nature Journal) ಬರೆಯುವಂತೆ ಪ್ರೋತ್ಸಾಹಿಸಿ. ಕೆಲವು ಕಾಗದಗಳನ್ನು ಒಟ್ಟಿಗೆ ಸೇರಿಸಿ ಹೊಲಿಯುವ ಅಥವಾ ಪಿನ್ ಮಾಡುವ ಮೂಲಕ ಅವರೇ ಒಂದು ಪುಟ್ಟ ಪುಸ್ತಕ ತಯಾರಿಸಬಹುದು. ಶಾಲಾ ಅವಧಿಯ ಕೊನೆಯಲ್ಲಿ, ಮಕ್ಕಳು ತಾವು ಗಮನಿಸಿದ ಅತ್ಯಂತ ಆಸಕ್ತಿದಾಯಕ ವಿಷಯಗಳ ಪ್ರದರ್ಶನವನ್ನು ಏರ್ಪಡಿಸಬಹುದು.

---

**ಕೊಡುಗೆ:**

**ನೇಚರ್ ಕನ್ಸರ್ವೇಶನ್ ಫೌಂಡೇಶನ್** (NCF) ಒಂದು ಲಾಭರಹಿತ ಸಂಸ್ಥೆಯಾಗಿದ್ದು, ನೈಸರ್ಗಿಕ ಪ್ರಪಂಚದ ಸಂಶೋಧನೆ ಮತ್ತು ಸಂರಕ್ಷಣೆಯತ್ತ ಗಮನ ಹರಿಸುತ್ತದೆ. NCF ಸಂಸ್ಥೆಯು 'ಶಿಕ್ಷಣ ಮತ್ತು ಸಾರ್ವಜನಿಕ ಸಹಭಾಗಿತ್ವ' (Education and Public Engagement) ಕಾರ್ಯಕ್ರಮದ ಮೂಲಕ ಮಕ್ಕಳು ಮತ್ತು ದೊಡ್ಡವರು ಪರಿಸರ ವೀಕ್ಷಣೆಯಲ್ಲಿ ತೊಡಗಿಸಿಕೊಳ್ಳಲು ಅನೇಕ ಅವಕಾಶಗಳನ್ನು ಕಲ್ಪಿಸುತ್ತಿದೆ. NCF ಪರಿಸರ ಶಿಕ್ಷಣಕ್ಕೆ ಸಂಬಂಧಿಸಿದ ಸಾಮಗ್ರಿಗಳನ್ನು ಅಭಿವೃದ್ಧಿಪಡಿಸುತ್ತದೆ, ಪ್ರದರ್ಶಿಸುತ್ತದೆ ಮತ್ತು ವಿತರಿಸುತ್ತದೆ. ಈ ಮಾರ್ಗದರ್ಶಿಯನ್ನು ಮೊದಲ ಬಾರಿಗೆ ಐ ವಂಡರ್... ಪತ್ರಿಕೆಯ ಜೂನ್ 2016ರ ಸಂಚಿಕೆಯಲ್ಲಿ ಪ್ರಕಟಿಸಲಾಗಿತ್ತು. ಈ ಸಂಚಿಕೆಯಲ್ಲಿ ನೀಡಲಾದ ಇದರ ಪರಿಷ್ಕೃತ ಆವೃತ್ತಿಯನ್ನು ಹಕ್ಕುಸ್ವಾಮ್ಯ ಹೊಂದಿರುವವರ ಅನುಮತಿಯೊಂದಿಗೆ ಪ್ರಕಟಿಸಲಾಗಿದೆ.

Nature Classrooms

nature conservation foundation

ಐ ವಂಡರ್...
ರೀಡಿಸ್ಕವರಿಂಗ್ ಸ್ಕೂಲ್ ಸೈನ್ಸ್

ಅನುವಾದ: **ಚಂದ್ರಿಕಾ ವಿಜಯೇಂದ್ರ** | ಪರಿಶೀಲನೆ: **ಪಿ. ಜಿ. ಸ್ಮಿತಾ**